**PAPER CLIPPINGS**

9

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ

ದಿನಾಂಕ : DATE : 9/9/2020

ದಿ: 9/9/20

# ಕೆಐಎಗೆ ಮೆಟ್ರೋ ರೈಲು

## 3 ಒಡಂಬಡಿಕೆಗಳಿಗೆ ಸಹಿ | 2024ಕ್ಕೆ ಸಂಚಾರ ನಿರೀಕ್ಷೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ)ಗೆ 2024ರ ಡಿಸೆಂಬರ್ ವೇಳೆಗೆ ಮೆಟ್ರೋ ಸಂಚಾರ ಆರಂಭವಾಗುವ ನಿರೀಕ್ಷೆ ಇದೆ.

ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರ ಮತ್ತು ಹೆಬ್ಬಾಳ ಮಾರ್ಗವಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರು ಟರ್ಮಿನಲ್‌ಗಳಿಗೆ ಸಾಗುವ ಒಟ್ಟು 56 ಕಿ.ಮೀ. ದೂರದ ಯೋಜನೆಯನ್ನು 14,844 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗುತ್ತದೆ.

ಇದರ ಒಂದು ಭಾಗವಾಗಿ 800 ಕೋಟಿ ರೂ. ವೆಚ್ಚದಲ್ಲಿ 4.95 ಕಿ.ಮೀ. ದೂರದ ಹೊರ ವರ್ತುಲ-ಏರ್‌ಪೋರ್ಟ್ ಮೆಟ್ರೋ ವಿಮಾನ ನಿಲ್ದಾಣ ಭಾಗವನ್ನು ಸ್ಥಾಪಿಸಲು ಬಿಐಎಎಲ್ ಮತ್ತು ಬಿಎಂಆರ್‌ಸಿಎಲ್ ನಡುವೆ ಮಂಗಳವಾರ ಒಡಂಬಡಿಕೆ ನಡೆಯಿತು. ಮುಖ್ಯಮಂತ್ರಿ ಯಡಿಯೂರಪ್ಪ ಸಮ್ಮುಖದಲ್ಲಿ ಎರಡೂ ಕಂಪನಿಗಳ ಪ್ರತಿನಿಧಿಗಳು ಸಹಿ ಹಾಕಿದರು.

» **ಮುಖ್ಯಮಂತ್ರಿ ಯಡಿಯೂರಪ್ಪ ಉಪಸ್ಥಿತಿ**

ಬೆಂಗಳೂರಿನ ಎಲ್ಲ ಭಾಗಗಳಿಂದ ಬರುವ ನಿವಾಸಿಗಳು ಮತ್ತು ಉದ್ಯಮಿ ಪ್ರಯಾಣಿಕರಿಗೆ ಕಡಿಮೆ ವೆಚ್ಚದ ಮತ್ತು ಉತ್ತಮ ಕಾರ್ಯಕ್ಷಮತೆಯ ಸಾರಿಗೆ ಮಾದರಿ ದೊರೆಯಲಿದೆ. ಜತೆಗೆ ವಿಮಾನ ನಿಲ್ದಾಣದ ಕಡೆಗೆ ಸಾಗುವ ರಸ್ತೆಗಳಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ನೆರವಾಗಲಿದೆ. ವಿಮಾನ ನಿಲ್ದಾಣದ ಆವರಣದಲ್ಲಿ ಇರುವ ಎರಡು ಮೆಟ್ರೋ ನಿಲ್ದಾಣಗಳ ಅಭಿವೃದ್ಧಿ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಬಿಐಎಎಲ್ ನೋಡಿಕೊಳ್ಳಲಿದೆ.

ಈ ಯೋಜನೆಯಿಂದ ಪ್ರತಿ ನಿತ್ಯ 7.8 ಲಕ್ಷ ಪ್ರಯಾಣಿಕರಿಗೆ ಸೇವೆ ದೊರೆಯಲಿದೆ. ವಿಮಾನ ನಿಲ್ದಾಣದ ಆವರಣದಲ್ಲಿರುವ ಎರಡು ನಿಲ್ದಾಣಗಳು ನಿತ್ಯ 60 ಸಾವಿರ ಪ್ರಯಾಣಿಕರಿಗೆ 2024ರಲ್ಲಿ ದೈನಂದಿನ ಸೇವಾ ಸೌಲಭ್ಯ ನೀಡಲಿವೆ. 2041ರ ಹೊತ್ತಿಗೆ ಪ್ರಯಾಣಿಕರ ಸಂಖ್ಯೆ 1.88 ಲಕ್ಷಕ್ಕೆ ಹೆಚ್ಚುವ ನಿರೀಕ್ಷೆ ಮಾಡಲಾಗಿದೆ.

2021ರ ಮಾರ್ಚ್ ವೇಳೆಗೆ ಏರ್‌ಪೋರ್ಟ್ ಮೆಟ್ರೋ ವಿಭಾಗದ ನಿರ್ಮಾಣ ಕಾರ್ಯ ಆರಂಭವಾಗುವ ನಿರೀಕ್ಷೆ ಇದೆ. 56 ಕಿಲೋ ಮೀಟರ್ ದೂರದ ಮೆಟ್ರೋ ವಯಾಡಕ್ಟ್ ಮತ್ತು 30 ನಿಲ್ದಾಣಗಳಿಗೆ ನಿರ್ಮಾಣ ಕಾರ್ಯಗಳಿಗಾಗಿ ಟೆಂಡರ್ ಕರೆಯಲಾಗಿದೆ.

ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರವರೆಗಿನ ಮೊದಲ ಎರಡು ಪ್ಯಾಕೇಜ್‌ಗಳ ಕಾರ್ಯ 2020ರ ಡಿಸೆಂಬರ್ ವೇಳೆ ಆರಂಭವಾಗುವ ನಿರೀಕ್ಷೆ ಇದೆ. ಅಲ್ಲದೆ, ಕೆ.ಆರ್.ಪುರದಿಂದ ವಿಮಾನ ನಿಲ್ದಾಣದವರೆಗಿನ ಮೂರು ಪ್ಯಾಕೇಜ್‌ಗಳ ಕಾರ್ಯ 2021ರ ಮಾರ್ಚ್‌ಗೆ ಆರಂಭವಾಗುವ ನಿರೀಕ್ಷೆ ಇದೆ. ವಿಮಾನ ನಿಲ್ದಾಣದ ವಿಭಾಗ ಮತ್ತು ಹೆಬ್ಬಾಳದಿಂದ ಟ್ರಂಪೆಟ್ ಜಂಕ್ಷನ್ ಭಾಗಗಳಿಗೆ ಆದ್ಯತೆ ನೀಡಲಾಗುತ್ತಿದೆ. ಒಆರ್‌ಆರ್- ಏರ್‌ಪೋರ್ಟ್ ಮೆಟ್ರೋಗೆ ಅವಶ್ಯಕವಾಗಿರುವ 94 ಎಕರೆ ಭೂಪ್ರದೇಶದ ಮೂರನೇ ಎರಡರಷ್ಟು ಭಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.



ವಿಜಯವಾಣಿ

ಮೆಟ್ರೋ ಮಾರ್ಗ ನಿರ್ಮಾಣ ಸಂಬಂಧ ಬಿಐಎಎಲ್ ಮತ್ತು ಬಿಎಂಆರ್‌ಸಿಎಲ್ ಮಂಗಳವಾರ ಒಡಂಬಡಿಕೆ ಮಾಡಿಕೊಂಡವು. ಸಿಎಂ ಯಡಿಯೂರಪ್ಪ ಉಪಸ್ಥಿತರಿದ್ದರು.

### ಏರ್‌ಪೋರ್ಟ್ ರೈಲು ನಿಲ್ದಾಣಕ್ಕೆ ಒಪ್ಪಂದ

ಏರ್‌ಪೋರ್ಟ್ ರೈಲು ನಿಲ್ದಾಣಕ್ಕಾಗಿ ಬಿಐಎಎಲ್ ಮತ್ತು ಭಾರತೀಯ ರೈಲ್ವೆ ಒಡಂಬಡಿಕೆ ಮಾಡಿಕೊಂಡಿವೆ. ವಿಡಿಯೋ ಕಾನ್ಫರೆನ್ಸ್ ಮೂಲಕ ಯಡಿಯೂರಪ್ಪ ಮತ್ತು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ಸುರೇಶ್ ಅಂಗಡಿ ಉಪಸ್ಥಿತಿಯಲ್ಲಿ ಸಹಿ ಹಾಕಲಾಯಿತು. ಏರ್‌ಪೋರ್ಟ್ ರೈಲು ನಿಲ್ದಾಣದ ನಿರ್ಮಾಣ ಪೂರ್ಣವಾಗುವ ಹಂತದಲ್ಲಿದ್ದು, ಶೀಘ್ರದಲ್ಲಿಯೇ ಕಾರ್ಯಾಚರಣೆ ಆರಂಭಿಸಲಿದೆ. ಈ ನಿಲ್ದಾಣವನ್ನು ಬಿಐಎಎಲ್ ನಿರ್ಮಿಸುತ್ತಿದ್ದು, ಭಾರತೀಯ ರೈಲ್ವೆಗೆ ಹಸ್ತಾಂತರಿಸಲಿದೆ. ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಭಾರತೀಯ ರೈಲ್ವೆ ಕೈಗೊಳ್ಳಲಿದೆ.

### ವಿಶೇಷತೆಗಳು

- ವಿಮಾನ ನಿಲ್ದಾಣದ ಹಾಲ್ಟ್ ಸ್ಟೇಷನ್‌ನಿಂದ ನಿಗದಿಗೊಳಿಸಲಾದ ವೇಳಾಪಟ್ಟಿಗೆ ಅನುಗುಣವಾಗಿ ಉಚಿತ ಶಟಲ್ ಸೇವೆ, ಟರ್ಮಿನಲ್ ಮತ್ತು ವಿಮಾನ ನಿಲ್ದಾಣದ ಇತರೆ ಭಾಗಗಳಿಗೆ ರೈಲ್ವೆ ಸೇವೆಗಳನ್ನು ಪೂರೈಸಲಾಗುತ್ತದೆ.
- ಬೆಂಗಳೂರಿನ ಎಲ್ಲ ಭಾಗಗಳಿಂದ ಬರುವ ಸಾಮಾನ್ಯ ಮತ್ತು ಉದ್ಯಮಿ ಪ್ರಯಾಣಿಕರಿಗೆ ಕಡಿಮೆ ವೆಚ್ಚದ ಮತ್ತು ಉತ್ತಮ ಕಾರ್ಯಕ್ಷಮತೆಯ ಸಾರಿಗೆ ಮಾದರಿಯನ್ನು ಪೂರೈಸಲಿದೆ.
- ವಿಮಾನ ನಿಲ್ದಾಣದ ಕಡೆಗೆ ಸಾಗುವ ರಸ್ತೆಗಳಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ರೈಲು ನಿಲ್ದಾಣ ನೆರವಾಗಲಿದೆ.



ಬಿಐಎಎಲ್ ಸೇರಿ ಸರ್ಕಾರಗಳು ಮತ್ತು ಹಲವಾರು ಪಾಲುದಾರರು ಹಾಗೂ ಏಜೆನ್ಸಿಗಳಿಂದ ಈ ಯೋಜನೆ ಕಾರ್ಯರೂಪಕ್ಕೆ ತರುವ ಪ್ರಯತ್ನ ನಡೆದಿದೆ. ಇದು ನಮ್ಮ ಆರ್ಥಿಕತೆಗೆ ನೆರವಾಗುವುದಲ್ಲದೆ, ದೇಶದ ಬೆಳವಣಿಗೆಗೆ ಅವಕಾಶ ಮಾಡಿಕೊಡಲಿದೆ.

| ಸುರೇಶ್ ಅಂಗಡಿ ರೈಲ್ವೆ ಸಹಾಯಕ ಸಚಿವ

ಎಲ್ಲ ನವೀನ ಸಾರಿಗೆಗೆ ರೈಲ್ವೆ ಮುಕ್ತವಾಗಿದ್ದು, ವಿಮಾನ ನಿಲ್ದಾಣಕ್ಕೆ ಸಂಪರ್ಕ ಬದಲಾವಣೆ ತರುವಂಥದ್ದಾಗಿದೆ. ಸಂಚಾರಕ್ಕಾಗಿ ರಸ್ತೆ, ರೈಲು ಮತ್ತು ವಾಯು ಸಂಪರ್ಕ ಜಾಲ ಸೃಷ್ಟಿಸಲಾಗುತ್ತಿದೆ.

| ಅಜಯ್‌ಕುಮಾರ್ ಸಿಂಗ್ ಪ್ರಧಾನ ವ್ಯವಸ್ಥಾಪಕ, ನೈಋತ್ಯ ರೈಲ್ವೆ